ದಿನಾಂಕ 17.05.2016ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ಅಧ್ಯಕ್ಷತೆಯಲ್ಲಿ ನಡೆದ ಗ್ರಾಮೀಣ ಇಂಧನ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆಯ ನಡವಳಿ :-

**ಸಭೆಯಲ್ಲಿ ಹಾಜರಿದ್ದವರು ; ಪಟ್ಟಿ ಲಗತ್ತಿಸಿದೆ.**

ಶ್ರೀ ಬಾಲರಾಜ್, ಯೋಜನಾ ನಿರ್ದೇಶಕರು (ಸಗ್ರಾಇಂಕಾ) ರವರು ಸಭೆಯಲ್ಲಿ ಉಪಸ್ಥಿತರಿದ್ದವರನೆಲ್ಲಾ ಸ್ವಾಗತಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರು 2015-16ನೇ ಸಾಲಿನ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಪ್ರಗತಿ ವರದಿಯನ್ನು ಪರಿಶೀಲಿಸಿ, ಕೆಳಕಂಡ ಅಂಶಗಳನ್ನು ತೀರ್ಮಾನಿಸಲಾಯಿತು.

- ಶೇ. 100ರಷ್ಟು ಪ್ರಗತಿ ಸಾಧಿಸಿದ ಬೀದರ್ ಜಿಲ್ಲೆಯನ್ನು ಪ್ರಶಂಸಿಸಲಾಯಿತು.
- ಕಾರ್ಯಕ್ರಮದಡಿ ಪ್ರಗತಿ ಕುಂಠಿತವಾಗಿರುವ ಕುರಿತಂತೆ ಯೋಜನಾ ಅಭಿಯಂತರರೊಂದಿಗೆ ಚರ್ಚಿಸಲಾಗಿದ್ದು, ಬಹುತೇಕ ಯೋಜನಾ ಅಭಿಯಂತರರು, ಮರಳಿನ ಸಮಸ್ಯೆ, ಬರ, ಉಚಿತ LPG ಲಭ್ಯತೆ, ಘಟಕದ ಅಂದಾಜು ವೆಚ್ಚ, ಸ್ಥಾವರಗಳನ್ನು ನಿರ್ಮಿಸಿಕೊಳ್ಳಲು ಫಲಾನುಭವಿಗಳು ಮುಂದೆಬರುತ್ತಿಲ್ಲ ಮತ್ತು ಜಾನುವಾರುಗಳ ಕೊರತೆಯಿಂದಾಗ ಪ್ರಗತಿ ಕುಂಠಿತಗೊಂಡಿದೆ. ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಮಾಡುವ ನಿಟ್ಟಿನಲ್ಲಿ ಅಧುನಿಕವಾಗಿ ಹಾಗೂ ಸ್ಥಳೀಯವಾಗಿ ಲಭ್ಯ ವಾಗುವ ಸಾಮಾಗ್ರಿಗಳೊಂದಿಗೆ ತಯಾರಿಸಲ್ಪಟ್ಟ MOULD ಗಳನ್ನು ಅಳವಡಿಸುವುದು. (ಉದಾ: ಯೋಜನಾ ಅಭಿಯಂತರರು, ಮೈಸೂರು ರವರು ಆವಿಷ್ಕಾರಗೊಳಿಸಿದ ಮಾದರಿ).
- ಶ್ರೀ ಉತ್ತಮ ಕುಮಾರ್, ಯೋಜನಾ ಅಭಿಯಂತರರು, ಹಾವೇರಿ ರವರು ಕಾರ್ಯಕ್ರಮದ ಅನುಷ್ಠಾನದಲ್ಲಿ ಆಸಕ್ತಿವಹಿಸದೇ ಸಮರ್ಪಕವಾಗಿ ನಿರ್ವಹಿಸದೇ ಇರುವುದರಿಂದ ಕಾರ್ಯಕ್ರಮದ ಪ್ರಗತಿಗೆ ಕುಂಠಿತಗೊಳ್ಳಲು ಕಾರಣರಾಗಿರುವ ಕಾರಣ ಸದರಿಯವರನ್ನು ಅಮಾನತ್ತುಗೊಳಿಸಲು ತೀರ್ಮಾನಿಸಲಾಯಿತು.
- ಯೋಜನಾ ಅಭಿಯಂತರರು, ಪ್ರತಿ ತಾಲ್ಲೂಕು ಪಂಚಾಯತಿಯಲ್ಲಿ ನಡೆಯುವ ಪ್ರಗತಿ ಪರಿಶೀಲಿನಾ ಸಭೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಉಪಯುಕ್ತತೆ ಕುರಿತಂತೆ ಗ್ರಾಮೀಣ ಜನತೆಯಲ್ಲಿ ಅರಿವು & ಜಾಗೃತಿ ಮೂಡಿಸುವುದು.
- ಕಾರ್ಯಕ್ರಮದಡಿ ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡುವುದು / ಯೋಜನಾ ಅಭಿಯಂತರರು ಅಥವಾ ಟರ್ನ್ ಕೀ ಏಜೆಂಟರುಗಳು ಫಲಾನುಭವಿಗಳನ್ನು ಆಯ್ಕೆಮಾಡಿದ್ದಲ್ಲಿ, ಆ ಫಲಾನುಭವಿಗಳ ಪಟ್ಟಿಯನ್ನು ಗ್ರಾಮ ಪಂಚಾಯತಿಯ ಗಮನಕ್ಕೆ ತಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಿಂದ ಮೂರು ದಿನಗಳೊಳಗೆ ದೃಢೀಕರಿಸಿ ಕೊಳ್ಳತಕ್ಕದ್ದು. ವಿಳಂಬವಾದಲ್ಲಿ ನೇರವಾಗಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ರವರಿಗೆ ಫಲಾನುಭವಿಗಳ ಪಟ್ಟಿಯನ್ನು ಸಲ್ಲಿಸಿ ದೃಢೀಕರಿಸಿಕೊಳ್ಳುವುದು.

- ಯೋಜನಾ ಅಭಿಯಂತರರು ಜಿಲ್ಲೆ / ತಾಲ್ಲೂಕು / ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಹಾಲಿನ ಕೇಂದ್ರಗಳಲ್ಲಿ ಹೆಚ್ಚುವರಿ ಜಾನುವಾರುಗಳನ್ನೊಳಗೊಂಡ ಗ್ರಾಮಗಳ ವಿವರಗಳನ್ನು ಪಡೆದು ಆ ಗ್ರಾಮಗಳಲ್ಲಿ ಅನಿಲ ಸ್ಥಾವರಗಳನ್ನು ನಿರ್ಮಿಸಲು ಒತ್ತು ನೀಡುವುದು.
- ಘಟಕಗಳನ್ನು ನಿರ್ಮಿಸಿಕೊಳ್ಳುವಾಗ ಅಗತ್ಯವಿರುವ Wages ಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ Convergence ಮೂಲಕ ಅನುಷ್ಠಾನಗೊಳಿಸಲು ಸುತ್ತೋಲೆ ಹೊರಡಿಸಲು ತೀರ್ಮಾನಿಸಲಾಯಿತು.
- ಸುಮಾರು 30 ವರ್ಷಗಳಿಂದ ಒಂದೇ ರೀತಿ ಮಾದರಿಯ ಸ್ಥಾವರಗಳನ್ನು ನಿರ್ಮಿಸುತ್ತಿರುವುದು, ಕಾರ್ಯಕ್ರಮದ ಪ್ರಗತಿ ಕುಂಠಿತಗೊಳ್ಳಲು ಕಾರಣವಾಗಿದೆ ಎಂಬ ಅಂಶವನ್ನು ಮನಗಂಡು ಪ್ರಸ್ತುತ ಘಟಕ ವೆಚ್ಚ, ಮರಳಿನ ಸಮಸ್ಯೆ ಇತ್ಯಾದಿಗಳ ಸಮಸ್ಯೆಗೆ ಪರ್ಯಾಯವಾಗಿ ಕಡಿಮೆ ವೆಚ್ಚದಡಿ ಮುಂದುವರೆದ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಹಾಲಿ ಅನುಷ್ಠಾನಗೊಳಿಸುತ್ತಿರುವ ಮಾದರಿಯನ್ನು ಕೃಷಿ ವಿಶ್ವ ವಿದ್ಯಾಲಯ, ಇಂಜಿನಿಯರಿಂಗ್ ಕಾಲೇಜ್ ಹಾಗೂ ಅನುಮೋದಿತ ಸರ್ಕಾರೇತರ ಸಂಸ್ಥೆಗಳಿಗೆ ಕಳುಹಿಸಿ ಮಾದರಿಯ ವಿನ್ಯಾಸ ಪಡೆಯುವುದು.
- ಪ್ರತಿ ತಾಲ್ಲೂಕಿನ ಒಂದು ಗ್ರಾಮವನ್ನು ಸಂಪೂರ್ಣ ಜೈವಾನಿಲ ಗ್ರಾಮವನ್ನಾಗಿ ಗ್ರಾಮವನ್ನಾಗಿ ಘೋಷಿಸುವ ನಿಟ್ಟಿನಲ್ಲಿ ವಿಶೇಷವಾಗಿ ಕಾರ್ಯಕ್ರಮವನು ಅನುಷ್ಠಾನಗೊಳಿಸುವುದು.
- ಪ್ರತಿ ಜಿಲ್ಲೆಗೆ ಒಂದರಂತೆ Mould ಗಳನ್ನು ನೀಡತಕ್ಕದ್ದು.
- 25ನೇ ಜೂನ್ 2016ರಂದು ನೂತನ ಮಾದರಿ (ಉದಾ. ಅಡುಗೆ ಮನೆ ತಾಜ್ಯ, ಬಯೋ ವೇಸ್ಟ್) MOULD ಗಳ ಕುರಿತಂತೆ ಯೋಜನಾ ಅಭಿಯಂತರರು, ಪರಿಸರ ಮಂಡಳಿ, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳನ್ನೊಗೊಂಡ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಏರ್ಪಡಿಸಲು ತೀರ್ಮಾನಿಸಲಾಯಿತು.
- 2015-16ನೇ ಸಾಲಿನ ಕಾರ್ಯಕ್ರಮದ ಹಣ ಬಳಕೆ ಪ್ರಮಾಣ ಪತ್ರವನ್ನು CA ರವರಿಂದ ಆಡಿಟ್ ಮಾಡಿಸಿ 30ನೇ ಮೇ 2016ರೊಳಗೆ ಕಡ್ಡಾಯವಾಗಿ ಸರ್ಕಾರಕ್ಕೆ ಸಲ್ಲಿಸುವುದು.
- ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮವು ಕೇಂದ್ರ ಪುರಸ್ಕೃತ ಕಾರ್ಯಕ್ರಮವಾಗಿರುವುದರಿಂದ CA ರವರಿಂದ ಆಡಿಟ್ ಮಾಡಿಸಿ ಕೇಂದ್ರ ಸರ್ಕಾರಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕಿದೆ. ಇದಕ್ಕೆ ಯೋಜನಾ ಅಭಿಯಂತರರು ಜಿಲ್ಲೆಗಳಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳನ್ನು CA ರವರಿಂದ ಆಡಿಟ್ ಮಾಡಿಸುವ ಪ್ರಕ್ರಿಯೆಗೆ ಪ್ರತಿ ವರ್ಷ ಟೆಂಡರ್ ಕರೆದು ಅನುಮೋದಿತ CA ರವರಿಂದ ಆಡಿಟ್ ಮಾಡಿಸಲು ವಿಳಂಬವಾಗುವುದರಿಂದ 30ನೇ ಮೇ 2016ರ ಕಾಲಮಿತಿಯೊಳಗೆ ಸರ್ಕಾರಕ್ಕೆ ಸಲ್ಲಿಸಲು ಕಷ್ಟಸಾಧ್ಯವಾಗುತ್ತದೆ ಎಂದು

ತಿಳಿಸಿರುವ ಹಿನ್ನೆಲೆಯಲ್ಲಿ ಕೂಡಲೇ ಸದರಿ ಕಾರ್ಯಕ್ರಮವನ್ನು CA ರವರಿಂದ ಆಡಿಟ್ ಮಾಡಿಸುವ ಕುರಿತಂತೆ ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರ ಅಭಿಪ್ರಾಯದನ್ವಯ ಜಿಲ್ಲೆಗಳಿಗೆ ನಿರ್ದೇಶನ ನೀಡಲು ತೀರ್ಮಾನಿಲಾಯಿತು.

- ಯೋಜನಾ ಅಭಿಯಂತರರು 15ನೇ ಆಗಸ್ಟ್ 2016ರೊಳಗೆ ಸ್ವರಳ, ಆಧುನಿಕ, ಕಡಿಮೆ ವೆಚ್ಚದ ಹಾಗೂ ದೀರ್ಘಕಾಲ ಬಾಳಿಕೆ ಮತ್ತು ಸಮರ್ಪಕವಾಗಿ ಕಾರ್ಯಕ್ಷಮತೆಯಿಂದ ಕೂಡಿದ ಹೊಸ ವಿನ್ಯಾಸದ ಮಾದರಿ ಘಟಕಗಳನ್ನು ಅಳವಡಿಸುವ ಕುರಿತಂತೆ ಗ್ರಾಮೀಣ ಜನತೆಯಲ್ಲಿ ಅರಿವು & ಜಾಗೃತಿ ಮೂಡಿಸಿ ಕಾರ್ಯಕ್ರಮದಡಿ ಸ್ಥಾವರಗಳ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಪ್ರಾಥಮಿಕ ಚಟುವಟಿಕೆಗಳನ್ನು ಪೂರ್ಣಗೊಳಿಸಿ, ಜಿಲ್ಲೆಯ ಅವಿಷ್ಕಾರಗಳೊಂದಿಗೆ ಶುದ್ಧ ಪರಿಸರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪುರಸ್ಕಾರ ಪಡೆಯುವ ಕುರಿತಂತೆ ಸರ್ಕಾರಕ್ಕೆ ವರದಿ ನೀಡುವುದು.
- 2016–17ನೇ ಸಾಲಿನಲ್ಲಿ ಕಾರ್ಯಕ್ರಮದಡಿ ನಿಗದಿ ಪಡಿಸುವ ಭೌತಿಕ ಗುರಿಯ ಪ್ರಗತಿಯನ್ನು 1ನೇ ನವೆಂಬರ್ 2016ರೊಳಗೆ ಪೂರ್ಣ ಪ್ರಮಾಣದಲ್ಲಿ ಸಾಧಿಸುವುದು. ಅದರಲ್ಲೂ ವಿಶೇಷವಾಗಿ ಮೈಸೂರು ಜಿಲ್ಲೆ 1000 ಭೌತಿಕ ಗುರಿಯ ಪ್ರಗತಿಯನ್ನು ಕಡ್ಡಾಯವಾಗಿ ಪೂರ್ಣ ಪ್ರಮಾಣದಲ್ಲಿ ಸಾಧಿಸುವುದು.
- ಯೋಜನಾ ಅಭಿಯಂತರರು ಕಾರ್ಯಕ್ರಮದ ಸಮರ್ಪಕ ಅನುಷ್ಠಾನ ಹಾಗೂ ಪೂರ್ಣ ಪ್ರಮಾದ ಪ್ರಗತಿ ಸಾಧಿಸುವಲ್ಲಿ ನೇರ ಹೊಣೆಗಾರರಾಗಿರುತ್ತಾರೆ.
- ಯೋಜನಾ ಅಭಿಯಂತರರು ಸ್ಥಾವರಗಳ ಪರಿಶೀಲನೆಗಾಗಿ ಸರ್ಕಾರಿ ವಾಹನದ ಅಗತ್ಯತೆ ಇದ್ದಲ್ಲಿ ಜಿಲ್ಲಾ ಮಟ್ಟದ / ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿಕೊಳ್ಳುವುದು. ವಾಹನ ಸೌಲಭ್ಯ ಒದಗಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲು ತೀರ್ಮಾನಿಸಲಾಯಿತು.
- ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾರ್ಯಕ್ರಮದ ಟರ್ನ್ ಕೀ ಏಜೆನ್ಸಿ ರವರ ನವೀಕರಣ ಆದೇಶವನ್ನು ಕೂಡಲೇ ಹೊರಡಿಸುವುದು.
- ಗ್ರಾಮೀಣ ಇಂಧನ ಕಾರ್ಯಕ್ರಮದ ಉಸ್ತುವಾರಿಗಾಗಿಯೇ ನಿಯೋಜಿತಗೊಂಡ ಯೋಜನಾ ಅಭಿಯಂತರರಿಗೆ ಗ್ರಾಮೀಣ ಇಂಧನ ಕಾರ್ಯಕ್ರಮದ ಜೊತೆಗೆ ಇನ್ನಿತರೆ ಕೆಲಸಗಳನ್ನು ವಹಿಸಿದ್ದಲ್ಲಿ, ಗ್ರಾಮೀಣ ಇಂಧನ ಕಾರ್ಯಕ್ರಮದ ಪ್ರಗತಿ ಕುಂಠಿತವಾಗದಂತೆ ಕ್ರಮವಹಿಸುವುದು.
- ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಗೆ ಸಂಬಂಧಿಸಿದಂತೆ ಅನುಷ್ಠಾನಗೊಳ್ಳುತ್ತಿರುವ ಇತರೆ ಯೋಜನೆಗಳಡಿ ಸಹ ಯೋಜನಾ ಅಭಿಯಂತರರ ಅಭಿಪ್ರಾಯ ಮತ್ತು ಸಲಹೆ ಪಡೆಯುವಂತೆ ತೀರ್ಮಾನಿಸಲಾಯಿತು.

* 2015-16ನೇ ಸಾಲಿಗೆ ಸಂಬಂಧಿಸಿದಂತೆ 31ನೇ ಮಾರ್ಚ್ 2016ರೊಳಗೆ ಸೌರ ಬೆಳಕು ಯೋಜನೆಯಡಿ ಸೌರ ಬೀದಿ ದೀಪಗಳ ಅನುಷ್ಠಾನ ಕಾರ್ಯವನ್ನು ಪೂರ್ಣಗೊಳಿಸಲು ತಿಳಿಸಿದ್ದರೂ ಸಹ ಇದುವರೆವಿಗೂ ಪೂರ್ಣಗೊಳಿಸದೇ ಇರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸುತ್ತಾ, ಪ್ರಾಯೋಗಿಕ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅರೆ ಸರ್ಕಾರಿ ಮೂಲಕ ಕೂಡಲೇ ಕ್ರಮ ವಹಿಸುವಂತೆ ತಿಳಿಸುವಂತೆ ತೀರ್ಮಾನಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಡಾ: ಎನ್ ನಾಗಾಂಬಿಕಾ ದೇವಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕಡತ ಸಂಖ್ಯೆ : ಗ್ರಾಅಪ 14 ಜೈಅಯೋ 2016 ಬೆಂಗಳೂರು, ದಿನಾಂಕ 17.05.2016

ಗೆ:

1. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪ ಇಲಾಖೆ.
3. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಯೋಜನಾ ಅಭಿಯಂತರರು(ಸಗ್ರಾಇಂಕಾ).
4. ರಕ್ಷ ಕಡತ / ಹೆಚ್ಚುವರಿ ಪ್ರತಿ.

ಪ್ರತಿಯನ್ನು,

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಅಪ ಇಲಾಖೆ.
2. ವ್ಯವಸ್ಥಾಪಕರು, ಇಲಾಖಾ Web Site ಪ್ರಕಟಣೆಗಾಗಿ.

## ದಿನಾಂಕ 17.05.2016 ರಂದು ನಡೆದ ಗ್ರಾಇಂಕಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಹಾಜರಾದವರ ಪಟ್ಟಿ

1. ಡಾ: ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಶ್ರೀ ಎನ್. ಕೃಷ್ಣಪ್ಪ, ನಿರ್ದೇಶಕರು (ಗ್ರಾಮೂಸೌ-2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಶ್ರೀ ಬಾಲರಾಜ್, ಯೋಜನಾ ನಿರ್ದೇಶಕರು (ಸಗ್ರಾಇಂಕಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ಶ್ರೀ ಮಾರ್ಕಂಡೇಯ್ಯ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್ ಬಾಗಲಕೋಟೆ & ವಿಜಯಪುರ.
5. ಶ್ರೀ ಎಂ. ಎಸ್. ಸುದರ್ಶನ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ . ಪಂಚಾಯತ್, ಬೆಂಗಳೂರು(ಗ್ರಾ).
6. ಶ್ರೀ ಶಿವಣ್ಣ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೆಂಗಳೂರು (ನ).
7. ಶ್ರೀ ಶಿವಾನಂದ ಕಮತಗಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೆಳಗಾವಿ.
8. ಶ್ರೀ ಜಿ. ಎಲ್. ಬದಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬಳ್ಳಾರಿ & ಕೊಪ್ಪಳ.
9. ಶ್ರೀ ವೀರಣ್ಣ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೀದರ್.
10. ಶ್ರೀ ಬಸವರಾಜ್ ಯಲಬುರಗಿ , ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಮಂಡ್ಯ & ಚಾಮರಾಜನಗರ.
11. ಶ್ರೀ ಜಯಕುಮಾರ , ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು & ಶಿವಮೊಗ್ಗ.
12. ಶ್ರೀ ಬಸವರಾಜಪ್ಪ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ದಾವಣಗೆರೆ & ಚಿತ್ರದುರ್ಗ.
13. ಶ್ರೀ ದತ್ತಾತ್ರಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಹಾಸನ, ದಕ್ಷಿಣ ಕನ್ನಡ ಮತ್ತು ಉಡುಪಿ.
14. ಶ್ರೀ ಕೃಷ್ಣ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಉತ್ತರ ಕನ್ನಡ & ಧಾರವಾಡ.
15. ಶ್ರೀ ಉತ್ತಮ ಕುಮಾರ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಹಾವೇರಿ & ಗದಗ.
16. ಶ್ರೀ ರಾಜೇಂದ್ರ ದಂಡೆ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಕಲಬುರಗಿ.
17. ಶ್ರೀ ನಾಗೇಶ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಕೊಡಗು.
18. ಶ್ರೀ ಮರಳ ಸಿದ್ದೇಶ್ವರ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ & ಕೋಲಾರ.
19. ಶ್ರೀ ಮುರ್ತುಜ ಆಲಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಮೈಸೂರು.
20. ಶ್ರೀ ನಂಜುಂಡೇ ಗೌಡ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ರಾಮನಗರ.
21. ಶ್ರೀ ಎಸ್. ಪಿ. ಪಾಟೀಲ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ರಾಯಚೂರು & ಯಾದಗಿರಿ.
22. ಶ್ರೀ ಶ್ರೀನಿವಾಸ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ತುಮಕೂರು.
23. ಶ್ರೀಮತಿ ನೇತ್ರಾವತಿ, ಅಧೀಕ್ಷಕರು, ಗ್ರಾಮೂಸೌ-2, ಗ್ರಾಅಪಂ. ರಾಜ್ ಇಲಾಖೆ.